ಪುಸ್ತಕ ಪರಿಚಯ




ಶ್ರೀ ಆದಿಶಂಕರಾಚಾರ್ಯ ವಿರಚಿತ

## ಸೌಂದರ್ಯಲಹರೀ

(ಭಾವಲಹರೀ)

**ಲೇಖಕರು: ಶ್ರೀಮತಿ ಹೆಚ್.ಎಲ್. ಸೀತಾದೇವಿ.**

**ಪ್ರಕಾಶಕರು:** ನವಭಾರತೀ ಪ್ರಕಾಶನ,
ಸರಸ್ವತಿಪುರಂ, ಮೈಸೂರು – ೫೭೦೦೦೯
ಪುಟಗಳು : ೧೬+೧೮೬ ಬೆಲೆ : ೧೨೦

ಸ್ತೋತ್ರಗ್ರಂಥಗಳಲ್ಲಿ ಅತ್ಯಂತ ಮಹತ್ವವುಳ್ಳ 'ಸೌಂದರ್ಯ ಲಹರಿ'ಯು ಶ್ರೀಮಚ್ಛಂಕರಭವವತ್ಪಾದರಿಂದ ರಚಿಸಲ್ಪಟ್ಟಿದೆ. ಈ ಸ್ತೋತ್ರಗಳಲ್ಲಿ ಜಗಜ್ಜನನಿಯ ಸೌಂದರ್ಯ ಹಾಗೂ ಮಹಿಮಾನುವರ್ಣನೆಗಳನ್ನು ಮಾಡಿರುವುದಲ್ಲದೆ, ಮಂತ್ರ ಹಾಗೂ ತಂತ್ರಶಾಸ್ತ್ರದ ಅನೇಕ ವಿಷಯಗಳನ್ನು ಶ್ರೀಶಂಕರರು ತಿಳಿಸಿದ್ದಾರೆ.

ಈಗೀಗ 'ಸೌಂದರ್ಯಲಹರೀ' ಸ್ತೋತ್ರಗಳನ್ನು ಅನೇಕರು ಕಲಿತು ಬಾಯಿಪಾಠ ಮಾಡಿರುವುದಲ್ಲದೆ, ಶ್ರೀ ಶಂಕರ ಸ್ತೋತ್ರ ಪಾರಾಯಣದ ಸತ್ರದ ಅಂಗವಾಗಿ ಅನೇಕ ಅಭಿಯಾನಗಳೂ ನಡೆದಿವೆ. ಸತ್ಸಂಗಗಳಲ್ಲಂತೂ ನಿತ್ಯ ಪಾರಾಯಣವಾಗುತ್ತಿವೆ. ಆದರೆ ಪಾರಾಯಣ ಮಾಡುವಾಗ ಸ್ತೋತ್ರದ ಅರ್ಥ, ಭಾವಾರ್ಥ, ಪಠಣದ ಫಲಿತಾಂಶ ತಿಳಿದು ಮಾಡಿದರೆ ಹೆಚ್ಚು ಫಲ ಹಾಗೂ ಧನ್ಯತೆ ಉಂಟಾಗುತ್ತದೆ. ಈ ದಿಸೆಯಲ್ಲಿ ಲೇಖಕಿ ಸ್ತೋತ್ರಗಳ ಪ್ರತಿಪದಾರ್ಥ, ಭಾವಾರ್ಥ, ಟಿಪ್ಪಣಿಗಳನ್ನು ಬರೆದು ಪ್ರಕಟಿಸಿದ್ದಾರೆ. ನಿಜಕ್ಕೂ ಇದು ಅಭಿನಂದನೀಯವಾದ ಕಾರ್ಯ.

'ಸೌಂದರ್ಯ ಲಹರಿ'ಯ ಅನೇಕ ಅನುವಾದಗಳು ಈಗಾಗಲೇ ಕನ್ನಡದಲ್ಲಿ ಪ್ರಕಟವಾಗಿವೆ. ಆದರೆ ಲೇಖಕಿಯು ತಮ್ಮ ಗಂಭೀರ, ಸುಲಲಿತವಾದ, ವಿದ್ವತ್ಪೂರ್ಣವಾದ ಶೈಲಿಯಿಂದ, ಅನ್ವಯಾರ್ಥ ಪೂರ್ವಕವಾದ ತಾತ್ಪರ್ಯವನ್ನು ಬರೆದು, ಓದುವವರಿಗೂ, ಪಾರಾಯಣ ಮಾಡುವವರಿಗೂ, ಒಂದು ಕೈದೀವಿಗೆಯನ್ನು ಕೊಟ್ಟಿದ್ದಾರೆ. ಬಹಳ ಶ್ರಮಪಟ್ಟು ಈ ಹೊತ್ತಿಗೆಯನ್ನು ಬರೆದು ಪ್ರಕಟಿಸಿದ ಲೇಖಕಿಯವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಶ್ರೀದೇವಿಯ ಹಾಗೂ ಶ್ರೀಶಂಕರರ ಕೃಪಾಶೀರ್ವಾದಗಳು ಇವರಿಗೆ ಸಲ್ಲಲಿ ಎಂಬುದೇ ನಮ್ಮ ಆಶಯ.

***– ಉಷಾ***

# ಭಕ್ತನಿಗಾಗಿ ಪ್ರಭು ದ್ವಾರಪಾಲಕನಾದ

'ತಾಯಿ ತನ್ನ ಅಸಹಾಯಕ ಶಿಶುವನ್ನು ರಕ್ಷಿಸುವಂತೆ ಭಗವಂತನು ತನ್ನ ಭಕ್ತರನ್ನು ರಕ್ಷಿಸುತ್ತಾನೆ' ಎನ್ನುತ್ತದೆ ತುಲಸೀ ರಾಮಾಯಣ.

ಬಿಹಾರಿನ ಪಶ್ಚಿಮ ಚಂಪಾರಣ ಭಾಗದಲ್ಲಿ ಬೊತಿಯಾ ರಾಜ್ಯದ ರಾಜ ತೀರಿಕೊಂಡಾಗ, ಕೋರ್ಟ ಆಫ್ ವಾರ್ಡ್ ನಿಯಮದಂತೆ ಬ್ರಿಟಿಷರು ಅದನ್ನು ವಶಪಡಿಸಿಕೊಂಡರು. ಅಲ್ಲಿ ವಿ.ಇರಿನ್‌ನನ್ನು ಮ್ಯಾನೇಜರ್‌ನನನಾಗಿ ನೇಮಿಸಿದರು. ಅವನು ಬೋತಿಯಾದ ವಿಧವೆ ರಾಣಿಗೆ ಬುದ್ಧಿ ಭ್ರಮಣೆಯಾಗಿದೆಯೆಂದು ತೋರಿಸಿ, ಅವಳ ಅಧಿಕಾರವನ್ನು ವಶಪಡಿಸಿಕೊಂಡನು. ಆಗ ಶಿವಧಾರಿ ಮಿತ್ರ ಎಂಬಾತ ಅರಮನೆಯ ದ್ವಾರಪಾಲಕನಾಗಿದ್ದನು. ರಾತ್ರಿಯಿಡೀ ಕಾಯುವ ಕೆಲಸ ಅವನದಾಗಿತ್ತು. ಅವನೊಬ್ಬ ರಾಮಭಕ್ತ. ಊರಿನಲ್ಲಿ ಎಲ್ಲಿಯೇ ಶ್ರೀರಾಮನ ಭಜನೆ-ಕೀರ್ತನೆ ನಡೆದರೂ ಅವನು ಅಲ್ಲಿಗೆ ಹೋಗಿ ಭಾಗವಹಿಸುತ್ತಿದ್ದನು. ಕೆಲವರಿಗೆ ಅದನ್ನು ಕಂಡು ಸಹಿಸಲಾಗಲಿಲ್ಲ. ಅವರು ಅವನ ಮೇಲೆ ಮ್ಯಾನೇಜರ್ ಬಳಿ ದೂರಿತ್ತರು.

ಮ್ಯಾನೇಜರ್ ಒಂದು ರಾತ್ರಿ ದೂರನ್ನು ಪರೀಕ್ಷಿಸಲು ತಾನೇ ಹೋದನು. ಅವನೊಂದಿಗೆ ದೂರನ್ನು ನೀಡಿದ ವ್ಯಕ್ತಿಯೂ ಇದ್ದನು. ನೋಡಿದರೆ, ಮಿಶ್ರಾ ದ್ವಾರದಲ್ಲಿ ಕಾವಲು ಕಾಯುತ್ತ ಎಚ್ಚರವಾಗಿದ್ದನು. ಆಗ ದೂರು ತಂದ ವ್ಯಕ್ತಿ. ''ಇಲ್ಲ ಮಹಾಶಯರೇ, ಅವನು ಇಂತಹ ಕಡೆಯಲ್ಲಿ ಕೀರ್ತನೆಯಲ್ಲಿ ತೊಡಗಿದ್ದಾನೆ'' ಎಂದನು. ಆಗ ಅವರಿಬ್ಬರೂ ಅಲ್ಲಿಗೆ ಹೋಗಿ ನೋಡಿದಾಗ, ಅಲ್ಲಿ ಶಿವಧಾರಿ ಮಿಶ್ರ ತನ್ಮಯನಾಗಿ ಕೀರ್ತನೆಯಲ್ಲಿ ತೊಡಗಿದ್ದನು. ಅದನ್ನು ನೋಡಿ ಮ್ಯಾನೇಜರ್‌ನಿಗೆ ಆಶ್ಚರ್ಯವಾಯಿತು. ಅವನಿಗೆ ಗೊತ್ತಾಯಿತು, ದ್ವಾರಪಾಲಕನ ಕೆಲಸ ಮಾಡುತ್ತಿದ್ದವನು ಸ್ವಯಂ ರಾಮನೇ ಎಂದು.

ಮಿಶ್ರಾಗೆ ತನ್ನ ಕೆಲಸವನ್ನು ರಾಮನೇ ಮಾಡುತ್ತಿದ್ದಾನೆಂದು ತಿಳಿದಾಗ ಅವನು ಅಳತೊಡಗಿದನು. ನನ್ನಿಂದಾಗಿ ರಾಮನಿಗೆ ಅದೆಷ್ಟು ತೊಂದರೆಯಾಯಿತೆಂದು ದುಃಖದಿಂದ ಅವನು ತನ್ನ ಕೆಲಸಕ್ಕೆ ರಾಜೀನಾಮೆ ನೀಡಿದನು. ಮ್ಯಾನೇಜರ್ ಅವನ ರಾಜೀನಾಮೆಯನ್ನು ಸ್ವೀಕರಿಸದೆ, ಅವನಿಗೆ ಕೀರ್ತನೆಗೆ ಹೋಗಿ ಬರಲು ಒಂದು ಗಾಡಿಯನ್ನು ಉಚಿತವಾಗಿ ನೀಡಿ, ಕೆಲಸ ಮಾಡದಿದ್ದರೂ ವೇತನ ನೀಡುತ್ತಿದ್ದನು.

ಅವನು ದುಡಿಯುತ್ತಿದ್ದಾಗ ಇದೇ ರೀತಿ ಮುಂದುವರಿಯಿತು. ನಿವೃತ್ತನಾದ ಮೇಲೂ ಅವನು ಸದಾ ಕೀರ್ತನೆಯಲ್ಲಿ ಮೈಮರೆಯುತ್ತಿದ್ದನು. ಅವನು ಇತ್ತೀಚಿಗೆ ಮೃತನಾದನು. ನಾನು ಅವನನ್ನು ನೋಡಿದ್ದೇನೆ. ಇಂತಹ ಭಕ್ತರನ್ನೇ ಉದ್ದೇಶಿಸಿ ಭಗವಂತ 'ಯೋಗಕ್ಷೇಮಂ ವಹಾಮ್ಯಹಮ್' ಎಂದಿದ್ದಾನೆ. ಪುರಾಣಕಾಲದಲ್ಲಿ ಭಗವಂತ ಪಾತಾಳ ಲೋಕದಲ್ಲಿ ಬಲಿಯ ಬಾಗಿಲನ್ನು ಕಾದಂತೆ, ಇಂದಿಗೂ, ಮುಂದೆಯೂ ತನ್ನಲ್ಲಿ ಅನುರಕ್ತರಾದ, ಶರಣಾಗತ ಭಕ್ತರಿಗಾಗಿ ಅವರ ದ್ವಾರಪಾಲಕನಾಗುವುದಷ್ಟೇ ಅಲ್ಲ, ಇನ್ನೇನೂ ಬೇಕಿದ್ದರೂ ಮಾಡಲು ಸಿದ್ಧ. ✷

*ಜನಾರ್ದನ ಪಾಂಡೇಯ ವಿಪ್ರ, 'ಕಲ್ಯಾಣ', ಏಪ್ರಿಲ್ ೨೦೧೩*
*ಅನುವಾದ: **ಮಾತಾ ತ್ಯಾಗಮಯೀ***


# ಪಾಂಡುರಂಗನ ಭಕ್ತೆ ಗೋಮಾಬಾಯಿ

ಕಥೆ: ಎಂ. ಜಯಶ್ರೀ


ಚಿತ್ರ : ಶಂಕರ್

**1** ಗೋಮಾಬಾಯಿ ಪಂಡರಾಪುರದ ದೇವತೆಯಾದ ಭಗವಾನ್ ಪಾಂಡುರಂಗನ ಭಕ್ತೆ. ಸಣ್ಣ ವಯಸ್ಸಿನಲ್ಲೇ ಅವಳು ತನ್ನ ತಾಯಿತಂದೆಯರನ್ನು ಕಳೆದುಕೊಂಡಳು.


ವಿವಾಹವಾದ ಸ್ವಲ್ಪ ಸಮಯದ ಬಳಿಕ ಅವಳು ತನ್ನ ಪತಿಯನ್ನೂ ಕಳೆದುಕೊಂಡಳು.




**2** ಅವಳ ಬಳಿ ಸ್ವಲ್ಪ ಗೋಧಿಹಿಟ್ಟು ಮಾತ್ರವೇ ಇತ್ತು. ಅದರೊಂದಿಗೆ ಆಕೆ ಪಂಡರಾಪುರಕ್ಕೆ ಹೊರಟಳು. ದಾರಿಯಲ್ಲಿ ಅವಳು ಭೀಮಾನದಿಯನ್ನು ದಾಟಬೇಕಾಗಿ ಬಂತು.




**3** ಗೋಮಾಬಾಯಿ ಕಂಬನಿದುಂಬಿ ಅಂಬಿಗನನ್ನು ಕೇಳಿಕೊಂಡಳು.



**4** ಕೋಪದಿಂದ ಅಂಬಿಗ ಗೋಮಾಬಾಯಿಯನ್ನು ನದಿಗೆ ತಳ್ಳಿದ. ಅವಳು ಅಳುತ್ತ ಪಾಂಡುರಂಗನನ್ನು ಪ್ರಾರ್ಥಿಸಿದಳು.





**5** ಪರಂಧಾಮನೂ, ಜನನಮರಣಗಳಿಂದ ಕೂಡಿದ ಸಂಸಾರಸಾಗರದಿಂದ ಮಾನವನನ್ನು ಉದ್ಧರಿಸುವವನೂ ಆದ ದೇವರು ಒಬ್ಬ ಅಂಬಿಗನ ವೇಷದಲ್ಲಿ ಅವಳ ಮುಂದೆ ಕಾಣಿಸಿಕೊಂಡ.

**6** ಗೋಮಾಬಾಯಿಗೆ ತನ್ನ ಮುಂದೆ ಕಾಣಿಸಿಕೊಂಡ ಇನ್ನೊಬ್ಬ ಅಂಬಿಗ ಸಾಕ್ಷಾತ್ ಪಾಂಡುರಂಗನೇ ಎಂಬುದು ಗೊತ್ತಾಗಲಿಲ್ಲ.




**7** ಅಂಬಿಗನಾಗಿ ಕಾಣಿಸಿಕೊಂಡ ದೇವರು ಅವಳನ್ನು ನದಿ ದಾಟಿಸಿದ.





**8** ಮುಂಜಾನೆಯ ನಸುಕಿನ ವೇಳೆ ಪಾಂಡುರಂಗನು ಗೋಮಾಬಾಯಿಯನ್ನು ನದಿಯ ಇನ್ನೊಂದು ದಡದಲ್ಲಿ ಇಳಿಸಿದ.


**9** ದಡ ಸೇರಿದ ಗೋಮಾಬಾಯಿ ದೋಣಿಯಿಂದ ಇಳಿದಳು. ಕೃತಜ್ಞತೆ ಸಲ್ಲಿಸಲು ಅಂಬಿಗನತ್ತ ತಿರುಗಿ ನೋಡಿದರೆ, ಅಲ್ಲಿ ದೋಣಿಯೂ ಇರಲಿಲ್ಲ, ಅಂಬಿಗನೂ ಇರಲಿಲ್ಲ.




**10** ಗೋಮಾಬಾಯಿ ಪಂಡರಾಪುರದಲ್ಲಿ ಪಾಂಡುರಂಗನ ದೇವಾಲಯವನ್ನು ಪ್ರವೇಶಿಸಿದಳು. ತನ್ನ ಮನದಣಿಯುವಂತೆ ಆಕೆ ಪಾಂಡುರಂಗನ ದರ್ಶನ ಪಡೆದಳು. ಏಕಾದಶಿ ದಿನದಂದು ಅವಳು ಭಜನೆಯ ಮೇಳದೊಂದಿಗೆ ಸೇರಿಕೊಂಡಳು. ಭಕ್ತಿಯ ಪ್ರವಾಹದಲ್ಲಿ ತೇಲಿಹೋದ ಅವಳು, ಸಂಪೂರ್ಣ ತನ್ನನ್ನೇ ಮರೆತಳು.




**11** ಮರುದಿನ, ದ್ವಾದಶಿಯ ದಿನ ಪ್ರಾತಃಕಾಲ ಮತ್ತೆ ಗೋಮಾಬಾಯಿ ಹೃದಯದುಂಬಿ ಪ್ರಾರ್ಥಿಸಿದಳು.




**12** ಹಿಂದೆ ಅಂಬಿಗನಾಗಿ ಗೋಮಾಬಾಯಿಯ ಬಳಿಗೆ ಬಂದಿದ್ದ ಪಾಂಡುರಂಗ, ಈಗ ವೈಷ್ಣವ ಭಕ್ತನಾಗಿ ಅವಳ ಮುಂದೆ ಕಾಣಿಸಿಕೊಂಡ.

